(14) ವಿಷಯ: ಹಿಪ್ಪರಗಿಯಲ್ಲಿ ಭೂ ಸ್ವಾಧೀನದ ಕುರಿತು.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಹಿಪ್ಪರಗಿಯಲ್ಲಿ ಸುಮಾರು ನಾಲ್ಕು ವರ್ಷಗಳಿಂದ ಅಲ್ಲಿ ನೀರನ್ನು ತಡೆ ಹಿಡಿಯಲಾಗುತ್ತಿದೆ. FRL ಮೀರಿ ರೈತರ ಸಾವಿರಾರು ಎಕರೆ ಜಮೀನು ಮತ್ತೆ ನೀರಿನಲ್ಲಿ ಇರುವಂತಹ ಉದಾಹರಣೆ ಇದೆ. ಅಲ್ಲಿ ನಾವು, General Manager ಮತ್ತು MP ಹೋಗಿ ನೋಡಿಕೊಂಡು ಬಂದಿರುವುದಾಗಿದೆ. ಹೋದ ಸದನದಲ್ಲಿ ಅದನ್ನು ರೀ ಸರ್ವೇ ಮಾಡುತ್ತೇನೆಂದು ಸರ್ಕಾರ ಹೇಳಿತ್ತು. ಆ ಪ್ರಕಾರ ರೀ ಸರ್ವೇಯನ್ನು ಮಾಡಿದ್ದಾರೆ. ಆದರೆ ಅದಕ್ಕೆ 4(1) notification ಮಾಡುವ ಹಂತದಲ್ಲಿ ಅದನ್ನು ತಡೆ ಹಿಡಿಯಲಾಗಿದೆ. ಅದನ್ನು ಯಾವ ಕಾರಣಕ್ಕಾಗಿ ತಡೆ ಹಿಡಿದಿರಿ? ಒಬ್ಬ ಅಧಿಕಾರಿಯ ಪಿತೂರಿಯಿಂದ ರೈತರಿಗೆ ಅನ್ಯಾಯವಾಗಿದೆ. ಅಲ್ಲಿ ನಾಲ್ಕು ವರ್ಷಗಳಿಂದ ರೈತರು ಚಿತ್ರ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಒಂದು ಕಾಳು ಬೆಳೆ ಸಹಿತ ಅಲ್ಲಿ ಬರುತ್ತಿಲ್ಲ. ಅಲ್ಲಿ ನೀರು ನಿಂತು ಗ್ರಾಮಗಳು ನಡುಗಡ್ಡೆಗಳಾಗಿವೆ. ರೈತರು ನಾಲ್ಕು ವರ್ಷಗಳಿಂದ ಬೆಂಗಳೂರಿನ ಆಫೀಸುಗಳಿಗೆ ಅಡ್ಡಾಡುವಂತಹ ದೈನ್ಯ ಪರಿಸ್ಥಿತಿ ಒದಗಿದೆ. ಆದುದರಿಂದ ತಕ್ಷಣ ಅಲ್ಲಿ acquisition ಮಾಡಿಕೊಳ್ಳಬೇಕು ಮತ್ತು ಅಲ್ಲಿನ ರೈತರಿಗೆ ಪರಿಹಾರವನ್ನು ಕೊಡಬೇಕೆಂದು ಒತ್ತಾಯವನ್ನು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು, ಏನು ನೀವು ಭಾಷಣ ಮಾಡುತ್ತಿದ್ದೀರಿ. ಮಾನ್ಯ ಮಂತ್ರಿಗಳು ಏನು ಮಾಡಿದ್ದೀರೆಂದು ನೋಡಿ ಹೇಳಿ.

ಶ್ರೀ ಬಸವರಾಜ ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಅವರು ಕೊಟ್ಟಂತಹ ವಿಚಾರ ಬೇರೆ. ಅವರು ಹೇಳುತ್ತಿರುವುದು ಬೇರೆ ವಿಚಾರ. ಅವರು ಕಾಲರಾ ವಿಚಾರದ ಬಗ್ಗೆ ಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಕ್ರಮವನ್ನು ತೆಗೆದುಕೊಂಡಿದೆ.

ಅಧ್ಯಕ್ಷರು: ಈಗ ಅವರು ಹೇಳಿದ ವಿಚಾರದಲ್ಲಿ ಏನು ಹೇಳುತ್ತೀರಿ?

ಶ್ರೀ ಬಸವರಾಜ ಎಸ್.ಹೊರಟ್ಟಿ: ಈ ವಿಚಾರಕ್ಕೂ, ಆ ವಿಚಾರಕ್ಕೂ ಸಂಬಂಧ ಇಲ್ಲ. ಕಾಲರದ ವಿಚಾರದಲ್ಲಿ ಈಗಾಗಲೇ ಕ್ರಮ ತೆಗೆದುಕೊಂಡಿದೆ.